

# ‘ಮನು’
## (ಪೆನುಗೊಂಡೆ ನರಸಿಂಹರಂಗನ್)
**(1946 – 2011)**

ವಿಜ್ಞಾನದ ವಿಷಯ, ವಸ್ತುಗಳನ್ನು ಆಧರಿಸಿ ಕತೆ, ಕಾದಂಬರಿಗಳನ್ನು ಬರೆದ ‘ಮನು’ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಮೇಲುಕೋಟೆಯವರು. ತಂದೆ ಪೆನುಗೊಂಡೆ ದೇಶಿಕಾಚಾರ್ಯರು, ತಾಯಿ ರಂಗನಾಯಕಮ್ಮ. ವಿದ್ಯಾಭ್ಯಾಸ – ಮೆಕ್ಯಾನಿಕಲ್ ಎಂಜಿನಿಯರಿಂಗ್‌ನಲ್ಲಿ ಬಿ.ಇ. ಪದವಿ, ಕನ್ನಡ ಮತ್ತು ಮನಃಶಾಸ್ತ್ರಗಳಲ್ಲಿ ಎಂ.ಎ. ಪದವಿ. ವೃತ್ತಿಯಲ್ಲಿ ಎಂಜಿನಿಯರ್ ಆದ ಅವರು ವಿವಿಧ ಸಂಸ್ಥೆಗಳಲ್ಲಿ ಕೆಲಸ ಮಾಡಿದ್ದಾರೆ.
‘ಮನು’ ಅವರು ಕಾಲೇಜು ವಿದ್ಯಾರ್ಥಿಯಾಗಿದ್ದಾಗ ಬರೆದ ‘ಆನಂದಿ’ ಕತೆ ‘ಪ್ರಜಾವಾಣಿ’ಯ ದೀಪಾವಳಿ ಕಥಾ ಸ್ಪರ್ಧೆಯಲ್ಲಿ ವಿದ್ಯಾರ್ಥಿ ವಿಭಾಗದಲ್ಲಿ ಬಹುಮಾನ ಪಡೆದಿತ್ತು. ಅವರ 17 ಕಾದಂಬರಿಗಳು, ಮೂರು ರೂಪಾಂತರಗಳು, ಎಂಟು ಮಿನಿ ಕಾದಂಬರಿಗಳು ಪತ್ರಿಕೆಗಳಲ್ಲಿ ಧಾರಾವಾಹಿಗಳಾಗಿ ಪ್ರಕಟವಾಗಿವೆ. ಅವರ ಕಾದಂಬರಿಗಳನ್ನು ಆಧರಿಸಿ ‘ಸಾಹಸಸಿಂಹ’, ‘ಆಸ್ಫೋಟ’ ಎಂಬ ಸಿನಿಮಾಗಳು ತೆರೆಕಂಡಿವೆ. ‘ಮನು’, ಎರಡು ನಾಟಕಗಳನ್ನು ಬರೆದಿದ್ದಾರೆ. ಮತ್ತು ಕೆಲವು ಭಾಷಾಂತರಗಳನ್ನು ಮಾಡಿದ್ದಾರೆ.
ಅವರು 50ಕ್ಕೂ ಹೆಚ್ಚು ಸಣ್ಣಕತೆಗಳನ್ನು ಬರೆದಿದ್ದಾರೆ. ಅವರು ಮಕ್ಕಳಿಗಾಗಿ ಬರೆದ ಪುಸ್ತಕಗಳು – ‘ಮಕ್ಕಳಿಗಾಗಿ ಸಣ್ಣಕಥೆಗಳು’, ‘ಮಹಾಭಾರತದ ನೀತಿ ಕಥೆಗಳು’, ‘ಈಜಿಪ್ತಿನ ಕಥೆಗಳು’. ಅವರ ಪ್ರವಾಸ ಕಥನಗಳು – ‘ಈಜಿಪ್ತ್ ಪ್ರವಾಸ’ ಹಾಗೂ ‘ಸಮುದ್ರಮಂಥನ’.

ಎಂದುಕೊಂಡು ಅವನು ಹರ್ಷಪಟ್ಟ.

ಎಲ್ಲಾ ಅವನ ಕೃಪೆ ಎಂದುಕೊಂಡು ಕತ್ತೆತ್ತಿ ಮೇಲೆ ನೋಡಿದ.

★★★

**ಹೇ ಪ್ರಾಣವೇ. ನಾವೆಲ್ಲಾ ನಿನಗಾಗಿ ವಿಧವಿಧವಾದ ಭೋಜನ ಸಾಮಗ್ರಿಗಳನ್ನು ಅರ್ಪಿಸುತ್ತೇವೆ. ನೀನು ಅವನ್ನು ಭಕ್ಷಿಸುತ್ತೀಯ. ನೀನೇ ನಮ್ಮ ತಂದೆ; ಏಕೆಂದರೆ ನಾವೆಲ್ಲಾ ಹುಟ್ಟುವುದು ನಿನ್ನಿಂದ.**

★★★

ಪಕ್ಕದಲ್ಲಿ ಕುಳಿತಿದ್ದವನು ಶಂಭುವನ್ನು ಮೆಲ್ಲಗೆ ತಿವಿದ.

‘ಆ ಹುಡುಗರು ನಿನ್ನ ಮಕ್ಕಳೇನು ಸ್ವಾಮಿ’ ಆತ ಕೇಳಿದ. ಶಂಭು ಮೃದುವಾಗಿ ನಕ್ಕ.